ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : **984**
ಸದಸ್ಯರ ಹೆಸರು : ಶ್ರೀ ಕೆ.ಗೋವಿಂದ ರಾಜ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ : 20.09.2021
ಉತ್ತರಿಸುವ ಸಚಿವರು ಮಾನ್ಯ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು

*****

	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿನ ವಿದ್ಯುತ್ ಬೇಡಿಕೆ ಪ್ರಮಾಣ ವೆಷ್ಟು; (ಗೃಹ ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರಗಳ ಬೇಡಿಕೆ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಪ್ರತ್ಯೇಕವಾಗಿ ಒದಗಿಸುವುದು) ಬೆಂಗಳೂರು ನಗರದ ವಿದ್ಯುತ್ ಬೇಡಿಕೆ ಹಾಗೂ ಪೂರೈಕೆ ಬಗ್ಗೆ ಪ್ರತ್ಯೇಕ ಮಾಹಿತಿ ಒದಗಿಸುವುದು.	ರಾಜ್ಯದಲ್ಲಿ ಪ್ರಸ್ತುತ ಬೇಡಿಕೆಗನುಗುಣವಾಗಿ ವಿದ್ಯುತ್ತನ್ನು ಪೂರೈಸಲಾಗುತ್ತಿದೆ. ರಾಜ್ಯದಲ್ಲಿ 2021-22ನೇ ಸಾಲಿನಲ್ಲಿ ಆಗಸ್ಟ್-21ರ ಅಂತ್ಯದವರೆಗೆ ಗೃಹ, ಕೈಗಾರಿಕೆ ಸೇರಿದಂತೆ ಇತರೆ ಕ್ಷೇತ್ರಗಳ ವಿದ್ಯುತ್ ಬೇಡಿಕೆಯ ವಿವರಗಳು ಕೆಳಕಂಡಂತಿವೆ:

ವಿವರ	ವಿದ್ಯುತ್ ಬೇಡಿಕೆ ಮಿ.ಯೂ.ಗಳಲ್ಲಿ					
	ಬೆಸ್ಕಾಂ	ಮೆಸ್ಕಾಂ	ಸೆಸ್ಕ್	ಹೆಸ್ಕಾಂ	ಜೆಸ್ಕಾಂ (ಜುಲೈ-21ರ ಅಂತ್ಯಕ್ಕೆ)	ಒಟ್ಟು
ಕೃಷಿ	3083.16	703.94	1368.29	3142.56	1179.53	**9477.48**
ವಾಣಿಜ್ಯ	1365.24	207.45	162.09	250.32	151.44	**2136.54**
ಗೃಹ	3334.43	719.18	549.33	871.49	592.13	**6066.56**
ಕೈಗಾರಿಕೆ	2168.52	349.23	381.94	664.38	428.02	**3992.09**
ಇತರೆ	1468.71	188.50	403.81	377.21	263.85	**2702.08**
ಒಟ್ಟು	**11420.06**	**2168.3**	**2865.46**	**5305.96**	**2614.97**	**24374.75**

ಬೆಂಗಳೂರು ನಗರದಲ್ಲಿ 2021-22ನೇ ಸಾಲಿನಲ್ಲಿ ದಿನಾಂಕ 21-04-2021 ರಂದು 2760 ಮೆ.ವ್ಯಾ. ಗರಿಷ್ಠ ಬೇಡಿಕೆ ದಾಖಲಾಗಿದ್ದು, ಬೇಡಿಕೆಗನುಗುಣವಾಗಿ ವಿದ್ಯುತ್ ಪೂರೈಸಲಾಗಿದೆ.

	ಪ್ರಶ್ನೆ	ಉತ್ತರ
ಆ)	ರಾಜ್ಯದಲ್ಲಿ ವಿದ್ಯುತ್ ಬೇಡಿಕೆ ಮತ್ತು ಪೂರೈಕೆಯಲ್ಲಿನ ಅಂತರದ ಬಗ್ಗೆ ಸರ್ಕಾರಕ್ಕೆ ಅರಿವಿದೆಯೇ ಹಾಗಿದ್ದಲ್ಲಿ; ಕಳೆದ ಮೂರು ವರ್ಷಗಳ ಬೇಡಿಕೆ ಮತ್ತು ಪೂರೈಕೆ ಕುರಿತು ಮಾಹಿತಿಯನ್ನು ಒದಗಿಸುವುದು ;	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ಬೇಡಿಕೆ ಮತ್ತು ಪೂರೈಸಲಾದ ವಿದ್ಯುತ್ ನ ಪ್ರಮಾಣದ ವಿವರಗಳು ಕೆಳಕಂಡಂತಿವೆ:

ವರ್ಷ	ಬೇಡಿಕೆ (ಮಿ.ಯೂ.ಗಳಲ್ಲಿ)	ಪೂರೈಕೆ (ಮಿ.ಯೂ. ಗಳಲ್ಲಿ)	ಷರಾ
2018-19	76145.47	76145.47	
2019-20	75128.87	75128.87	
2020-21	71286.69	71271.69	ಮಾರ್ಚ್-21ರ ಮಾಹೆಯಲ್ಲಿ ಬೇಡಿಕೆ ಹೆಚ್ಚಾಗಿದ್ದುದರಿಂದ 15 ಮಿ.ಯೂ.ಗಳಷ್ಟು ಲೋಡ್ ಶೆಡ್ಡಿಂಗ್ ಮಾಡಲಾಗಿರುತ್ತದೆ.
2021-22 (ಏಪ್ರಿಲ್-21 ರಿಂದ ಆಗಸ್ಟ್-21 ವರೆಗೆ)	29968.66	29968.66	

ಇ)	ಕೊರತೆಯಾಗುವ ವಿದ್ಯುತ್ ನ್ನು ಸರಿದೂಗಿಸುವ ನಿಟ್ಟಿನಲ್ಲಿ ವಿದ್ಯುತ್ ಖರೀದಿ ಬಗ್ಗೆ ಸರ್ಕಾರದ ನಿಲುವು ಮತ್ತು ಇದುವರೆವಿಗೆ ಅನುಸರಿಸಿಕೊಂಡ ಬಂದಿರುವ ಮಾನದಂಡವೇನು ; (ಸಂಪೂರ್ಣ ವಿವರ ಒದಗಿಸುವುದು)	ಪ್ರಸ್ತುತ, ರಾಜ್ಯದಲ್ಲಿ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೆಚ್ಚಾಗಿದ್ದರೂ, ಬೇಡಿಕೆಗೆ ಸೀಮಿತವಾಗಿ ವಿದ್ಯುತ್ ಉತ್ಪಾದನೆಯನ್ನು ಮಾಡಲಾಗುತ್ತಿದ್ದು, ಯಾವುದೇ ವಿದ್ಯುತ್ ಕೊರತೆಯಿರುವುದಿಲ್ಲ. ಸಾಮಾನ್ಯವಾಗಿ ಕೊರತೆಯಾಗುವ ವಿದ್ಯುತ್ ನ್ನು ಸ್ಪರ್ಧಾತ್ಮಕ ಪ್ರಕ್ರಿಯೆ ಮೂಲಕ ವಿದ್ಯುತ್ ಮಂತ್ರಾಲಯದವರು ಪ್ರಕಟಿಸಿದ ಅಲ್ಪಾವಧಿ ವಿದ್ಯುತ್ ಖರೀದಿ ನಿಯಮಾವಳಿಗಳನ್ನು ಅನುಸರಿಸಿ ಸ್ಪರ್ಧಾತ್ಮಕ ಹಾಗೂ ಪಾರದರ್ಶಕ ಪ್ರಕ್ರಿಯೆ ಮೂಲಕ ರಾಷ್ಟ್ರೀಯ ಡೀಪ್-ಇ-ಪೋರ್ಟಲ್ ನಲ್ಲಿ ಟೆಂಡರ್ ಕರೆದು, ಟೆಂಡರ್ ನಲ್ಲಿ ನಿರ್ಧರಿತ ಸ್ಪರ್ಧಾತ್ಮಕ ವಿದ್ಯುತ್ ದರಗಳಿಗೆ ಹಾಗೂ ವಿದ್ಯುತ್ ಪ್ರಮಾಣಕ್ಕೆ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗದ ಅನುಮತಿ ಪಡೆದು ವಿದ್ಯುತ್ ಖರೀದಿಸಲಾಗುತ್ತದೆ ಹಾಗೂ ತುರ್ತು ಸಂದರ್ಭಗಳಲ್ಲಿ ವಿದ್ಯುತ್ ವಿನಿಮಯ ಕೇಂದ್ರದ ಮೂಲಕ ವಿದ್ಯುತ್ ನ್ನು ಖರೀದಿಸಬಹುದಾಗಿರುತ್ತದೆ. 2020-21ನೇ ಸಾಲಿನಲ್ಲಿ, ತಾತ್ಕಾಲಿಕ ವಿದ್ಯುತ್ ಕೊರತೆ ಉಂಟಾಗಿದ್ದುದರಿಂದ, ಮಾರ್ಚ್-23 ಮತ್ತು 24 ರಂದು ಐ.ಇ.ಎಕ್ಸ್. ಮುಖಾಂತರ 4.82 ಮಿಲಿಯನ್ ಯೂನಿಟ್ ಗಳಷ್ಟು ವಿದ್ಯುತ್‌ನ್ನು, ಪ್ರತಿ ಯೂನಿಟ್ಟಿಗೆ ರೂ.4.94 ದರದಲ್ಲಿ ಖರೀದಿಸಲಾಗಿರುತ್ತದೆ.

ಸಂಖ್ಯೆ: ಎನರ್ಜಿ 225 ಇಬಿಎಸ್ 2021

(ವಿ ಸುನಿಲ್ ಕುಮಾರ್)
ಇಂಧನ ಹಾಗೂ ಕನ್ನಡ ಮತ್ತು
ಸಂಸ್ಕೃತಿ ಸಚಿವರು